D-72-116

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ನಿಯಮ 72ರ ಅಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ವಿಷಯ:-** **ಕರಾವಳಿ ಜಿಲ್ಲೆಗಳಾದ ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸೋದ್ಯಮಕ್ಕೆ ಎಷ್ಟು ಅವಕಾಶವಿದ್ದರೂ, ಯಾವುದೇ ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೊಳ್ಳದೆ ಪ್ರವಾಸೋದ್ಯಮಕ್ಕೆ ದೊರಕುವ ಅನುದಾನವನ್ನು ಬಳಕೆ ಮಾಡದಿರುವ ಬಗ್ಗೆ ಮತ್ತು ಸರ್ಕಾರದ ಮುಂದಿರುವ ಯೋಜನೆಗಳ ಬಗ್ಗೆ.**

***

**ಉತ್ತರ:**

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡಗಳಲ್ಲಿ ಪ್ರವಾಸೋದ್ಯಮಕ್ಕೆ ವಿಫುಲ ಅವಕಾಶವಿರುವುದು ರಾಜ್ಯ ಮತ್ತು ಕೇಂದ್ರ ಪ್ರವಾಸೋದ್ಯಮ ಇಲಾಖೆಗಳ ಗಮನದಲ್ಲಿರುತ್ತದೆ. ಮೂರು ಕರಾವಳಿ ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೇಂದ್ರ ಮತ್ತುರಾಜ್ಯ ಸರ್ಕಾರಗಳಿಂದ ಪ್ರಯತ್ನವು ನಿರಂತರವಾಗಿರುತ್ತದೆ. ಈ ನಿಟ್ಟನಲ್ಲಿ ಕೈಗೊಂಡಿರುವ ಹಾಗೂ ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳ ವಿವರ ಈ ಕೆಳಕಂಡಂತಿರುತ್ತದೆ.

1. **ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಸಹಯೋಗದೊಂದಿಗೆ ಕರಾವಳಿ ವೃತ್ತ ಸಮಗ್ರ ಅಭಿವೃದ್ಧಿ ಯೋಜನೆ :-**

ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ಆಧರಿಸಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯವು 2014–15ನೇ ಸಾಲಿನಲ್ಲಿ ಕರಾವಳಿ ಪ್ರದೇಶದ ವಿವಿಧ ಬೀಚ್‌ಗಳಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಬಿಡುಗಡೆ ಮಾಡಿದ ರೂ.10.00 ಕೋಟಿ ಹಾಗೂ ರಾಜ್ಯ ಸರ್ಕಾರವು ಸಮಗ್ರ ಕರಾವಳಿ ಪ್ರವಾಸಿ ವೃತ್ತದ ಸಮಗ್ರ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ರೂ.25.52 ಕೋಟಿ ಹೀಗೆ ಒಟ್ಟು ರೂ.35.52 ಕೋಟಿಗಳ ವೆಚ್ಚದಲ್ಲಿ ರಾಜ್ಯದ 18 ಬೀಚ್‌ಗಳಲ್ಲಿ ಪ್ರವಾಸಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಈ ಪೈಕಿ ಈಗಾಗಲೇ ರೂ.22.11 ಕೋಟಿಗಳಷ್ಟು ವೆಚ್ಚ ಮಾಡಲಾಗಿದೆ.

ಮೇಲ್ಕಾಣಿಸಿದ ಅನುದಾನವೂ ಸೇರಿದಂತೆ ಕರಾವಳಿ ಪ್ರದೇಶದ ಪ್ರವಾಸೋದ್ಯಮ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ರೂ.82.60 ಕೋಟಿಗಳ ಕಾಮಗಾರಿಗಳನ್ನು ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು ಈ ಪೈಕಿ ಈಗಾಗಲೇ ರೂ.61.28 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

2. **ಕೋಸ್ಟಲ್ ಮಾಸ್ಟರ್ ಪ್ಲಾನ್ :-**

ರಾಜ್ಯದ ಸಂಪೂರ್ಣ 320 ಕಿ.ಮೀ ಕಡಲ ತೀರದ ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಂಬಂಧ ಸಮಗ್ರ ಯೋಜನಾ ವರದಿಯನ್ನು ಸಿದ್ದಪಡಿಸಲು ಮೆ॥ ಐ.ಪಿ.ಇ ಗ್ಲೋಬಲ್ ಸಂಸ್ಥೆಯನ್ನು ನೇಮಕ ಮಾಡಿದ್ದು, ಸದರಿ ಸಂಸ್ಥೆಯವರು ಕರಡು ಮಾಸ್ಟರ್ ಪ್ಲಾನ್ ಅನ್ನು ಸಲ್ಲಿಸಿರುತ್ತಾರೆ. ಅಂತಿಮ ಮಾಸ್ಟರ್ ಪ್ಲಾನ್‌ಅನ್ನು ನಿರೀಕ್ಷಿಸಲಾಗುತ್ತಿದೆ.

3. **ಬಂಡವಾಳ ವೆಚ್ಚಗಳ ಅಡಿ ಕೈಗೊಂಡಿರುವ ಕಾಮಗಾರಿಗಳು :-**

ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸುವ ಸಂಪರ್ಕರಸ್ತೆ ನಿರ್ಮಾಣ, ಯಾತ್ರಿನಿವಾಸ ಇತ್ಯಾದಿ ಕಾಮಗಾರಿಗಳ ಸಲುವಾಗಿ ಒಟ್ಟು ರೂ.86.32 ಕೋಟಿಗಳ ಅಂದಾಜು ವೆಚ್ಚದ 122 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ರೂ.41.64 ಕೋಟಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.

4. **ಕೆ.ಟಿ.ವಿ.ಜಿ ಶಿಫಾರಸ್ಸಿನಂತೆ ಕೈಗೊಂಡಿರುವ ಕಾಮಗಾರಿಗಳು:-**

ಪ್ರವಾಸಿ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಕೆ.ಟಿ.ವಿ.ಜಿ ಶಿಫಾರಸ್ಸಿನಂತೆ ಒಟ್ಟು ರೂ.46.89 ಕೋಟಿಗಳ ಅಂದಾಜು ವೆಚ್ಚದ 11 ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ರೂ.14.71 ಕೋಟಿಗಳಷ್ಟು ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.

..2/-

5. ಕರಾವಳಿ ಪ್ರವಾಸೋದ್ಯಮವನ್ನು ಪ್ರಚುರ ಪಡಿಸುವ ನಿಟ್ಟಿನಲ್ಲಿ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಕೆಳಕಂಡ ಉತ್ಸವಗಳನ್ನು, ಯಶಸ್ವಿಯಾಗಿ ಆಚರಿಸಲಾಗಿದೆ:

- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2017-18ನೇ ಸಾಲಿನಲ್ಲಿ ರೂ.25.00 ಲಕ್ಷಗಳ ವೆಚ್ಚದಲ್ಲಿ ಕರಾವಳಿ ಉತ್ಸವ & ರಿವರ್ ಫೆಸ್ಟಿವಲ್ ಉತ್ಸವವನ್ನು ಆಚರಿಸಲಾಗಿದೆ.
- ಉಡುಪಿ ಜಿಲ್ಲೆಯಲ್ಲಿ 2017-18ನೇ ಸಾಲಿನಲ್ಲಿ ರೂ.10.00 ಲಕ್ಷಗಳ ವೆಚ್ಚದಲ್ಲಿ ಬೀಚ್ ಉತ್ಸವ ಹಾಗೂ 2018-19ನೇ ಸಾಲಿನಲ್ಲಿ ರೂ.25.00 ಲಕ್ಷಗಳ ವೆಚ್ಚದಲ್ಲಿ ಅಳುಪೋತ್ಸವ ಉತ್ಸವವನ್ನು ಆಚರಿಸಲಾಗಿದೆ.
- ಉತ್ತರ ಕನ್ನಡ ಜಿಲ್ಲೆಯಲ್ಲಿ 2017-18ನೇ ಸಾಲಿನಲ್ಲಿ ರೂ.20.00 ಲಕ್ಷಗಳ ವೆಚ್ಚದಲ್ಲಿ ನೇತ್ರಾಣಿ ಸ್ಕೂಬಾ ಡೈವಿಂಗ್, 2018-19ನೇ ಸಾಲಿನಲ್ಲಿ ರೂ.50.00 ಲಕ್ಷಗಳ ವೆಚ್ಚದಲ್ಲಿ ಕರಾವಳಿ ಉತ್ಸವ ಹಾಗೂ 2019-20ನೇ ಸಾಲಿನಲ್ಲಿ ರೂ.50.00 ಲಕ್ಷಗಳ ವೆಚ್ಚದಲ್ಲಿ ಕದಂಬೋತ್ಸವವನ್ನು ಆಚರಿಸಲಾಗಿದೆ.

ಕಡತ ಸಂಖ್ಯೆ: ಟಿಓಆರ್61ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.